MMR MEDIA Since 1975

# MANGALORE MARKET REPORTS

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.48 ENGLISH DAILY Subscription Yearly - Rs. - FRIDAY 19-8-2022

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

## ಮಲೇಶಿಯನ್ ಪಾಮೆಣ್ಣೆ ಫ್ಯೂಚರ್ ದರ 2 ಶೇಕಡಾ ಹೆಚ್ಚಳ

ಹಿಂದಿನ 2 ವಾರಗಳ ಕನಿಷ್ಠ ಮಟ್ಟಕ್ಕಿಳಿದಿದ್ದ ಮಲೇಶಿಯನ್ ಪಾಮೆಣ್ಣೆ ದರ ಇಂದು 104 ರಿಂಗಿಟ್ಸ್ ಅಥವಾ 2.59 ಶೇಕಡಾ ಹೆಚ್ಚಳ ದಾಖಲಿಸಿದೆ. ಚಿಕಾಗೋ ಸೋಯಾ ಎಣ್ಣೆ ದರ 0.59 ಶೇಕಡಾ ಹೆಚ್ಚಳವಾಗಿದೆ. ರಿಂಗಿಟ್ಸ್ ಮೌಲ್ಯ 2017 ಜನವರಿಯ ನಂತರ ಕನಿಷ್ಠ ಮಟ್ಟಕ್ಕಿಳಿದಿದೆಯೆನ್ನಲಾಗಿದೆ. ಚೀನಾದ ದಲಿಯನ್ ಮಾರುಕಟ್ಟೆಯಲ್ಲೂ ಪಾಮೆಣ್ಣೆ, ಸೋಯಾಬೀನ್ ಎಣ್ಣೆ ದರ ಕುಸಿತವಾಗಿದೆ.

## ಅಡಿಕೆ ದರ ಹೆಚ್ಚಳ

ಹಿಂದಿನ ವರ್ಷದ ಹೊಸ ಅಡಿಕೆ ದರ ಇತ್ತೀಚಿಗೆ ಹೆಚ್ಚಳವಾಗುತ್ತಿದ್ದು ಇನ್ನೂ ಹೆಚ್ಚಳವಾಗುವ ನಿರೀಕ್ಷೆಯಿದೆ. ಹಿಂದಿನ ವರ್ಷದ ಹೊಸ ಅಡಿಕೆ(ಚಾಲಿ) ಹಾಗೂ ಚೋಲ್ ಈ ವರ್ಷ ಕಿಲೋಗ್ರಾಂಗೆ ರೂ 100ಕ್ಕೂ ಅಧಿಕ ದರ ವ್ಯತ್ಯಾಸ ಹೊಂದಿತ್ತು ಹಾಗೂ ಇತ್ತೀಚಿಗೆ ವ್ಯತ್ಯಾಸ ಸ್ವಲ್ಪ ಇಳಿಕೆಯಾಗಿದೆ. ಹಿಂದಿನ ವರ್ಷದ ಹೊಸ ಅಡಿಕೆ(ಚಾಲಿ) ಇನ್ನೂ ಹಳೆ ಅಡಿಕೆಯಾಗುವ ಸನಿಹದಲ್ಲಿದ್ದು(ಚೋಲ್) ಈಗಿರುವ ದರ ವ್ಯತ್ಯಾಸ ಇಳಿಕೆಯಾಗಿ ಚಾಲಿ ಅಡಿಕೆ ದರ ಇನ್ನೂ ಹೆಚ್ಚಳವಾಗುವ ಸಾಧ್ಯತೆಗಳಿವೆ. ಈ ವರ್ಷ(ಮುಂದಿನ ಹೊಸ ಬೆಳೆ) ಕೊಳೆರೋಗ ಹಾವಳಿ, ಹಿಂದಿನ ವರ್ಷದ ಅಕಾಲಿಕ ಮಳೆ ಮುಂತಾದ ಹವಾಮಾನ ವೈಪರೀತ್ಯಗಳಿಂದ ಉತ್ಪಾದನೆ ಇಳಿಕೆಯಾಗುವ ಸಾಧ್ಯತೆಗಳಿವೆ. ಇತ್ತೀಚಿಗೆ ಅಡಿಕೆ ಬೆಳೆಯುವ ಪ್ರದೇಶ ವಿಸ್ತೀರ್ಣ ಹೆಚ್ಚಳವಾಗುತ್ತಿದ್ದು, ಉತ್ಪಾದನೆ ಕುಸಿತದ ತೀವ್ರತೆಯನ್ನು ಇಳಿಕೆ ಮಾಡುವ ಸಾಧ್ಯತೆಯಿದೆ.

## ದಾಖಲೆ ಉತ್ಪಾದನೆ, ದಾಸ್ತಾನಿನ ಹೊರತಾಗಿಯೂ ಅಕ್ಕಿ ದರ ಹೆಚ್ಚಳಕ್ಕೆ ಕಾರಣವೇನು ?

ಹಿಂದಿನ(ಕಳೆದ) ಸೀಸನ್‌ನಲ್ಲಿ ದಾಖಲೆ ಭತ್ತ (ಅಕ್ಕಿ) ಉತ್ಪಾದನೆ ಹಾಗೂ ಸರಕಾರದ ದಾಖಲೆ ದಾಸ್ತಾನು ಮತ್ತು ಖಾಸಗಿ ವಲಯಗಳಲ್ಲೂ ಸಾಕಷ್ಟು ದಾಸ್ತಾನಿನ ಹೊರತಾಗಿಯೂ ಅಕ್ಕಿ ದರ ಗಣನೀಯ ತೀವ್ರ ಹೆಚ್ಚಳವಾಗಲು ಕಾರಣವೇನಿರಬಹುದು. ಈ ವರ್ಷ ನಾಟಿ ಪ್ರಮಾಣ ಇಳಿಕೆಯಾಗುವ ಸೂಚನೆಯ ನಂತರ ದರ ತೀವ್ರ ಏರಿಕೆಯಾಗುತ್ತಿದೆ. ರಫ್ತು ದಾಖಲೆ ಪ್ರಮಾಣದಲ್ಲಿತ್ತಾದರೂ ದಾಸ್ತಾನು ಅಗಾಧ ಪ್ರಮಾಣದಲ್ಲಿದೆ. ನಿಯಂತ್ರಿತ ಮಾರಾಟ ಹಾಗೂ ಕೃತಕ ಅಭಾವ ಸೃಷ್ಟಿಯ ಕಾರಣಗಳಿಂದ ದರ ತೀವ್ರ ಹೆಚ್ಚಳವಾಗಿರುವ ಸಾಧ್ಯತೆಗಳಿರಬಹುದು. ಉತ್ಪಾದನೆ ಮುಂದಿನ ಬೆಳೆಗೆ ಹೆಚ್ಚಿನ ಕುಸಿತ ವಾಗದಿದ್ದಲ್ಲಿ ಹಾಗೂ ಅಗತ್ಯ ಸರಕಾರಿ ನಿಯಂತ್ರಣಗಳಿಂದ ದರ ಸ್ಥಿರತೆಯಲ್ಲಿರಬಹುದು.

## ಎಫ್ ಸಿ ಐ ಯ ಅಕ್ಕಿ ಖರೀದಿ ಈ ವರ್ಷ 60 ಮಿಲಿಯನ್ ಟನ್

ಈ ವರ್ಷ ಆಗಸ್ಟ್ 1, 2022 ರ ತನಕ FCI 59 ಮಿಲಿಯನ್ ಟನ್‌ಗಳಿಗೂ ಅಧಿಕ ಅಕ್ಕಿ ಖರೀದಿಸಿದೆಯೆನ್ನಲಾಗಿದ್ದು, ಸೆಪ್ಟೆಂಬರ್ ತನಕ ಇದು 60 ಮಿಲಿಯನ್ ಟನ್‌ಗಳಿಗೂ ಅಧಿಕವಾಗಲಿದೆಯೆನ್ನಲಾಗಿದೆ. ಆಗಸ್ಟ್ 1 ರ ತನಕ FCI ನಲ್ಲಿ 27.9 ಮಿಲಿಯನ್ ಟನ್ ಅಕ್ಕಿ ದಾಸ್ತಾನಿದ್ದು ಮಿಲ್‌ಗಳಿಂದ ಇನ್ನೂ 13 ಮಿಲಿಯನ್ ಟನ್ ಅಕ್ಕಿ ಬರಲಿದೆ. ಒಟ್ಟು 40 ಮಿಲಿಯನ್ ಟನ್ ಗಳಿಗೂ ಅಧಿಕ ದಾಸ್ತಾನು ಹೊಂದಿದಂತಾಗಿದ್ದು ಇದು ಕನಿಷ್ಠ ಆಹಾರ ಭದ್ರತೆಯಂತೆ ಹೊಂದಿರಬೇಕಾದ ದಾಸ್ತಾನಿಗಿಂತ ಬಹಳ ಹೆಚ್ಚೆನ್ನಲಾಗಿದೆ.

## ಭತ್ತ ಖರೀದಿಯ ಗುರಿ ನಿಗದಿಗೆ ಆಹಾರ ಸಚಿವಾಲಯದಿಂದ ಸಭೆಗೆ ಕರೆ

ಭತ್ತ ಉತ್ಪಾದನೆ ಕುಸಿತದ ಭೀತಿಯಿಂದ, ಆಹಾರ ಸಚಿವಾಲಯ ಭತ್ತ ಖರೀದಿಯ ಗುರಿ ನಿಗದಿ (2022–23) ಮಾಡಲು ಆಗಸ್ಟ್ 30 ರಂದು ಸಭೆಗೆ ಕರೆ ನೀಡಿದೆಯೆನ್ನಲಾಗಿದೆ. ದೇಶದಲ್ಲಿ ಖಾರೀಫ್ ಭತ್ತ ನಾಟಿ ಪ್ರದೇಶ(ವಿಸ್ತೀರ್ಣ) ಇದುವರೆಗೆ 12 ಶೇಕಡಾ ಇಳಿಕೆಯಾಗಿದೆಯೆನ್ನಲಾಗಿದೆ. (ಹಿಂದಿನ ವರ್ಷಕ್ಕಿಂತ). ಉತ್ಪಾದನೆ ಹಿಂದಿನ ವರ್ಷಕ್ಕಿಂತ 10 ಮಿಲಿಯನ್ ಟನ್ ಇಳಿಕೆಯಾಗುವ ಸಾಧ್ಯತೆಯಿದ್ದು, ಮಾರುಕಟ್ಟೆ ದರಗಳು ಕನಿಷ್ಠ ಬೆಂಬಲ ಬೆಲೆಗಿಂತ ಅಧಿಕವಾಗುವ ಸಾಧ್ಯತೆಗಳಿದ್ದು ಸರಕಾರಿ ಏಜೆನ್ಸಿಗಳ ಖರೀದಿಗೆ ಸಮಸ್ಯೆಯಾಗಿ ಖರೀದಿ ಇಳಿಕೆಯಾಗುವ ಸಾಧ್ಯತೆಗಳಿವೆಯೆನ್ನಲಾಗಿದೆ. ಸರಕಾರಿ ಏಜೆನ್ಸಿಗಳು ಕ್ವಿಂಟಾಲ್‌ಗೆ ರೂ.2040 ರಂತೆ 202–23 ನೇ ಸಾಲಿನಲ್ಲಿ ಖರೀದಿ ಮಾಡಲಿವೆಯೆನ್ನಲಾಗಿದೆ.

## ಎಫ್ ಸಿ ಐ ಯ ಗೋಧಿ ದಾಸ್ತಾನು 14 ವರ್ಷಗಳ ಕನಿಷ್ಠ ಮಟ್ಟಕ್ಕೆ ಇಳಿಕೆ

ಎಫ್ ಸಿ ಐ ಯ ಗೋಧಿ ದಾಸ್ತಾನು ಈ ವರ್ಷ 2022 ಆಗಸ್ಟ್ 1 ಕ್ಕೆ 26.645 ಮಿಲಿಯನ್ ಟನ್‌ಗಳಾಗಿದ್ದು, 2009 ಆಗಸ್ಟ್ ನಂತರದ ಅತಿ ಕನಿಷ್ಠ ಮಟ್ಟಕ್ಕೆ ಇಳಿಕೆಯಾಗಿದೆಯೆನ್ನಲಾಗಿದೆ. ಹಿಂದಿನ ಸಾಲಿನಲ್ಲಿ ಖರೀದಿ ಇಳಿಕೆ(18.794MT) ಹಾಗೂ PMGKAY ಪಡಿತರ ಯೋಜನೆಗಳಿಗೆ ಹಿಂದಿನ 2 ವರ್ಷಗಳಿಂದ ಅಧಿಕ ವಿತರಣೆಯಿಂದ ದಾಸ್ತಾನು ಇಳಿಕೆಯಾಗಿದೆಯೆನ್ನಲಾಗಿದೆ. 2021–22 ರಲ್ಲಿ 106.84 ಮಿಲಿಯನ್ ಟನ್ ಗೋಧಿ ಉತ್ಪಾದನೆಯಾಗಿದೆಯೆನ್ನಲಾಗಿದೆ. ಗೋಧಿ, ಗೋಧಿ ಉತ್ಪನ್ನಗಳ (ಮೈದಾ, ಅಟ್ಟಾ, ಸೋಜಿ) ದರ ಗಳು ಗಣನೀಯ ಹೆಚ್ಚಳ ಕಂಡಿದೆ.